ಕಾರ್ಯಕ್ರಮ	ವೆಚ್ಚ (ಲಕ್ಷಗಳಲ್ಲಿ)
ಬೆಂಗಳೂರು ಆಕಾಶವಾಣಿಯಲ್ಲಿ ಫೋನ್-ಇನ್ ಕಾರ್ಯಕ್ರಮ	0.30
ದೂರದರ್ಶನದಲ್ಲಿ (ಡಿಡಿ-9) ಫೋನ್-ಇನ್ ಕಾರ್ಯಕ್ರಮ	0.23
ಪತ್ರಿಕೆಯಲ್ಲಿ ಜಾಹಿರಾತು.	0.14
ಬ್ರೋಚರ್‌ಗಳ ಮುದ್ರಣ	0.40
ಒಟ್ಟು	**1.07**

ಈ) ಹನಿ ನೀರಾವರಿ ಯೋಜನೆಯಲ್ಲಿ ಕಳೆದ 5 ವರ್ಷಗಳಲ್ಲಿ ರೂ. 4,960.44 ಲಕ್ಷ ಸಹಾಯಧನ ನೀಡಲಾಗಿದ್ದು, 31,654 ರೈತರು ಸವಲತ್ತು ಪಡೆದಿರುತ್ತಾರೆ. ವಿವರ ಈ ಕೆಳಕಂಡಂತೆ ಇರುತ್ತದೆ.

ವರ್ಷ	ಸಹಾಯಧನ ಮೊತ್ತ (ರೂ.ಲಕ್ಷ)	ರೈತರ ಸಂಖ್ಯೆ
2000-01	1222.56	6785
2001-02	681.26	3781
2002-03	768.98	4264
2003-04	1381.06	9502
2004-05	906.58	7322
ಒಟ್ಟು	**4960.44**	**31,654**

ಉ) ಇಲ್ಲ.

ಊ) ಉದ್ಭವಿಸುವುದಿಲ್ಲ.

371(521) ಶ್ರೀ ಧ್ರುವನಾರಾಯಣ ಆರ್. (ಸಂತೇಮರಳ್ಳಿ) : ಮಾನ್ಯ ಮೀನುಗಾರಿಕೆ ಮತ್ತು ಮುಜರಾಯಿ ಹಾಗೂ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತೋಟಗಾರಿಕೆ ಇಲಾಖೆಯಲ್ಲಿ ತಾಲ್ಲೂಕು ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿರುವ ತಾಂತ್ರಿಕ ಪದವೀಧರರ ಸಂಖ್ಯೆ ಎಷ್ಟು;

ಆ) ರಾಜ್ಯದಲ್ಲಿ ಶೇಕಡ 50ರಷ್ಟು ಖಾಲಿ ಇರುವ ತಾಂತ್ರಿಕ ಪದವೀಧರರ ಹುದ್ದೆಗಳನ್ನು ತುಂಬಲು ಸರ್ಕಾರದಿಂದ ಕೈಗೊಂಡ ಕ್ರಮವೇನು?

ಶ್ರೀ ಬಿ. ನಾಗರಾಜ ಶೆಟ್ಟಿ (ಮೀನುಗಾರಿಕೆ, ಮುಜರಾಯಿ ಮತ್ತು ತೋಟಗಾರಿಕೆ ಸಚಿವರು)

ಅ) ತಾಲ್ಲೂಕು ಮಟ್ಟದಲ್ಲಿ 163 ತಾಂತ್ರಿಕ ಪದವೀಧರರು ಕಾರ್ಯ ನಿರ್ವಹಿಸುತ್ತಿರುತ್ತಾರೆ.

ಆ) ನೇರ ನೇಮಕಾತಿ ಹುದ್ದೆಗಳನ್ನು ತುಂಬಲು ಕರ್ನಾಟಕ ಲೋಕಸೇವಾ ಆಯೋಗವನ್ನು ಕೋರಲಾಗಿದೆ.

372(474) ಶ್ರೀ ಗಡ್ಡದೇವರಮಠ್ ಗಡ್ಡಯ್ಯ ಶಿವಮೂರ್ತಯ್ಯ (ಶಿರಹಟ್ಟಿ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 2004-05ನೇ ಸಾಲಿನಲ್ಲಿ ಮಹಿಕೋ ಕಂಪನಿಯವರಿಂದ ಚಮತ್ಕಾರ ಹತ್ತಿ ಬೀಜ ಖರೀದಿಸಿ ಬಿತ್ತನೆ ಮಾಡಿ ನಷ್ಟ ಅನುಭವಿಸಿದ ಹಾವೇರಿ ಜಿಲ್ಲೆಯ ರೈತರಿಗೆ ಪರಿಹಾರ ಧನ ವಿತರಿಸಿದ್ದು ನಿಜವೇ;

ಆ) ಹಾಗಿದ್ದಲ್ಲಿ ಅದೇ ಬೀಜ ಖರೀದಿಸಿ ಬಿತ್ತನೆ ಮಾಡಿ ಬೆಳೆ ಬಾರದೆ ನಷ್ಟ ಅನುಭವಿಸಿದ ಗದಗ ಜಿಲ್ಲೆಯ ರೈತರಿಗೆ ಪರಿಹಾರ ಧನ ನೀಡದಿರುವುದು ಸರಕಾರದ ಗಮನಕ್ಕೆ ಬಂದಿದೆಯೇ;

ಇ) ಪರಿಹಾರ ಧನ ನೀಡಲು ಅನುಸರಿಸುತ್ತಿರುವ ಮಾನ ದಂಡವೇನು?

ಈ) ಹಾವೇರಿ ಜಿಲ್ಲೆ ರೈತರಿಗೆ ಪರಿಹಾರ ಧನವನ್ನು ನೀಡಿದಂತೆ ಗದಗ ಜಿಲ್ಲೆಯ ಪರಿಹಾರ ಧನ ವಿತರಿಸಲು ಸರಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಬಂಡೆಪ್ಪಾ ಕಾಶಂಪೂರ್ (ಕೃಷಿ ಸಚಿವರು)

ಅ) ಹೌದು.

ಆ) ಹಾವೇರಿ ಜಿಲ್ಲೆಯ ರೈತರು ಪರಿಹಾರದ ಬೇಡಿಕೆ ಮುಂದಿಟ್ಟಾಗ ಗದಗ ಜಿಲ್ಲೆಯ ರೈತರು ಈ ಬಗ್ಗೆ ದೂರು ನೀಡಿರುವುದಿಲ್ಲ. ತುಂಬಾ ತಡವಾಗಿ ಕೃಷಿ ಸಚಿವರ ಅಧ್ಯಕ್ಷತೆಯಲ್ಲಿ ಹಾವೇರಿ ಜಿಲ್ಲೆಯ ರೈತರಿಗೆ ಪರಿಹಾರ ನೀಡುವ ಬಗ್ಗೆ ಯೋಜನೆ ತಯಾರಿಸಿದ್ದು ಹಾಗೂ ಈ ಯೋಜನೆಯನ್ನು ಹೆಚ್ಚಿನ ಮಟ್ಟಿಗೆ ಕಾರ್ಯರೂಪಕ್ಕೆ ತಂದ ಸಂದರ್ಭದಲ್ಲಿ ಗದಗ ಜಿಲ್ಲೆಯ ಕೆಲ ರೈತರು ತಮಗೂ ಇದೇ ರೀತಿ ಪರಿಹಾರ ನೀಡುವಂತೆ ಮನವಿ ಮಾಡಿರುತ್ತಾರೆ.

ಇ) ಅ. ಚಮತ್ಕಾರ್ ಹತ್ತಿಯನ್ನು ಖರೀದಿಸಿ, ಬಿತ್ತನೆ ಮಾಡಿ ಬೆಳೆನಷ್ಟ ಹೊಂದಿದ ರೈತರಿಗೆ ಪ್ರತಿ ಎಕರೆಗೆ (ಒಂದು ಪ್ಯಾಕೆಟನ್ನು ಖರೀದಿಸಿ ಒಂದು ಎಕರೆ ಪ್ರದೇಶದಲ್ಲಿ ಬಿತ್ತನೆ ಮಾಡಲಾಗಿದೆ ಎಂದು ಪರಿಗಣಿಸಿ 1250 ರೂ (ಒಂದು ಸಾವಿರದ ಇನ್ನೂರು ಐವತ್ತು ರೂ) ಪ್ರಕಾರ ಪರಿಹಾರ ನೀಡಲಾಗಿದೆ.

ಆ. ಪರಿಹಾರ ಪಡೆಯಲು ಅರ್ಹರಾದ ರೈತರುಗಳು ಚಮತ್ಕಾರ್ ಹತ್ತಿ ಬೀಜವನ್ನು ಖರೀದಿಸಿರುವ ಬಗ್ಗೆ ಮೂಲ ರಸೀದಿ (Original Bill) ಅಥವಾ ನಿಜವಾಗಿ ಖರೀದಿಸಿರುವ ಬಗ್ಗೆ ದಾಖಲಾತಿ (Proof of the actual purchase) ಒದಗಿಸುವುದು.

ಇ. ಚಮತ್ಕಾರ್ ಹತ್ತಿ ಖರೀದಿಸಿರುವ ರೈತರಿಗೆ ಪ್ರತಿ ಪ್ಯಾಕೇಟ್‌ಗೆ 1250.00 ರೂ. ಪ್ರಕಾರ Account payee cheque ಮೂಲಕ ನೀಡಲಾಗಿರುತ್ತದೆ.

ಈ. ರೈತರಿಗೆ ನೀಡುವ ಚಕ್ಕನ್ನು ಜಿಲ್ಲಾಧಿಕಾರಿಗಳು, ಹಾವೇರಿ ಅಥವಾ ಅವರ ಪ್ರತಿನಿಧಿ (Deputy Commissioner or his representatives) ಮತ್ತು ಮಹಿಕೋ ಸಂಸ್ಥೆಯ ಅಧಿಕೃತ ಅಧಿಕಾರಿಯವರು (Mahyco authorized signatory) ಜಂಟಿಯಾಗಿ ಸಹಿ ಮಾಡುವುದು.

ಉ. ಪರಿಹಾರ ಪಡೆಯುವ ರೈತರು ಪರಿಹಾರ ಪಡೆದ ಬಗ್ಗೆ ಒಂದು ಮುಚ್ಚಳಿಕೆ ಪತ್ರವನ್ನು ನೀಡುವುದು. (under taking of compliance resolution and receipt of payment)

ಈ) ಮೇಲ್ಕಂಡ ಕಾರಣಗಳಿಂದಾಗಿ ಗದಗ ಜಿಲ್ಲೆಯ ರೈತರ ತಡವಾದ ಕೋರಿಕೆಯನ್ನು ಪರಿಗಣಿಸಲಾಗುವುದಿಲ್ಲ.